CAN -> Agenda Sl. No - 01 Ans date 30.3.22

File No. TD/57/TDQ/2022-DO-Trans (Computer No. 726956)

DFA/69

ಉಪವದಲ್ಲಿ 30/3/22 ರಂದು ಚರ್ಚೆ

170

ವಿ-72
ಶ್ರ-170

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-72 ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

ಮಣಿಪಾಲ್ ಟೆಕ್ನಾಲಜೀಸ್ ಸಂಸ್ಥೆ ಕಾನೂನು ಬಾಹಿರವಾಗಿ ಅಕ್ರಮವೆಸಗಿ ಉನ್ನತ ಮಟ್ಟದ ಸಾರಿಗೆ ಅಧಿಕಾರಿಗಳೊಂದಿಗೆ ಷಾಮೀಲಾಗಿ ತಮ್ಮ ಮೇಲಿರುವ ಎಫ್.ಐ.ಆರ್. ಕ್ರಿಮಿನಲ್ ಮೊಕದ್ದಮೆಗಳು, ಚಾರ್ಜ್ ಶೀಟ್‌ಗಳನ್ನು ಮರೆಮಾಚಿ, ಹಲವಾರು ಟೆಂಡರ್‌ಗಳನ್ನು ಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಯ ಹೆಸರಿನಲ್ಲಿ ಸಾರಿಗೆ ಇಲಾಖೆಯಿಂದ ಪಡೆದು, ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವ ಸಾರ್ವಜನಿಕ ಹಿತಾಸಕ್ತಿಯ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಟಿಡಿ 85 ಟಿಡಿಒ 2019, ಬೆಂಗಳೂರು, ದಿನಾಂಕ:11-08-2021 ರ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಗೆ ಸೇವಾದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999ರ ಕಲಂ-09, 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯದಲ್ಲಿರುವ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಯನ್ನು ಜಾರಿಗೆ ತರುವ ಸಂಬಂಧ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ಮತ್ತು ಟೆಂಡರ್ ಅಂಗೀಕರಿಸುವ ಸಮಿತಿಯನ್ನು ರಚಿಸಿಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಗೆ ಸೇವಾದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999ರ ಉಪಬಂಧಗಳ ಪ್ರಕಾರ ಟೆಂಡರ್ ಅನ್ನು ವಿದ್ಯುನ್ಮಾನ ಸಂಗ್ರಹಣಾ ಚೌಕಟ್ಟು (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್) ಮುಖಾಂತರ ಟೆಂಡರ್ ಅನ್ನು ದಿನಾಂಕ:18-09-2021 ರಂದು ಆಹ್ವಾನಿಸಲಾಯಿತು.

ದಿನಾಂಕ:25-10-2021 ರಂದು ಟೆಂಡರಿಗೆ ಸಂಬಂಧಿಸಿದಂತೆ ನಡೆದ Technical Evaluation ಸಭೆಯಲ್ಲಿ ಸಮಿತಿಯವರು ತೆಗೆದುಕೊಂಡ ನಿರ್ಣಯದಂತೆ, ಟೆಂಡರಿಗೆ ಅರ್ಜಿ ಸಲ್ಲಿಸಿದ ಇಬ್ಬರು ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ.ಲಿ. ಮತ್ತು ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು ಟೆಕ್ನಿಕಲ್ ತಾಂತ್ರಿಕ ಅರ್ಹತೆಯನ್ನು ಪಡೆದಿರುತ್ತಾರೆ.

ದಿನಾಂಕ:19-11-2021 ರಂದು Technical Evaluation ರಲ್ಲಿ ಅರ್ಹತೆ ಪಡೆದ ಇಬ್ಬರು ಬಿಡ್ಡುದಾರರು ಪರಿಕಲ್ಪನೆಯ ಪುರಾವೆಯನ್ನು(Proof of Concept) ಪಿಪಿಟಿ(PPT)ಯೊಂದಿಗೆ ಮತ್ತು ಪರಿಕಲ್ಪನೆಯ ಪುರಾವೆಯ (Proof of Concept) ಸಂಬಂಧ ನೇರ ಪ್ರದರ್ಶನವನ್ನು (Live Demonstration) ವಾಯುಮಾಲಿನ್ಯ ತಪಾಸಣಾ ಕೇಂದ್ರದಲ್ಲಿ ಸಮಿತಿಯ ಮುಂದೆ ಪ್ರಸ್ತುತಪಡಿಸಿರುತ್ತಾರೆ.

ದಿನಾಂಕ:01-12-2021 ರಂದು ತಾಂತ್ರಿಕ ಮೌಲ್ಯಮಾಪನ ಮತ್ತು ಅರ್ಹ ಬಿಡ್ಡುದಾರರಿಂದ ಪರಿಕಲ್ಪನೆಯ ಪುರಾವೆಯಲ್ಲಿ (Proof of Concept) ಅರ್ಹತೆ ಪಡೆದ ಬಿಡ್ಡುದಾರರು ಸಲ್ಲಿಸಿರುವ ಹಣಕಾಸಿನ ಪ್ರಸ್ತಾಪವನ್ನು ಅಂತಿಮಗೊಳಿಸುವ ಸಂಬಂಧ ಸಭೆ ನಡೆಸಿ Techno Commercial Evaluation ಅಂಕಗಳನ್ನು ಲೆಕ್ಕಾಚಾರ ಮಾಡಿದ ನಂತರ ಸಮಿತಿಯು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ಮಣಿಪಾಲ ರವರು ಅತಿ ಕಡಿಮೆ ದರ ನಮೂದು ಮಾಡಿರುವುದರಿಂದ ಎಲ್1 (L1) ಬಿಡ್ಡುದಾರರು ಎಂದು ಸಮಿತಿಯವರು ತೀರ್ಮಾನಿಸಿರುತ್ತಾರೆ.

ಸದರಿ ಕರೆಯಲಾದ ಟೆಂಡರಿನಲ್ಲಿ ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ. ರವರ ಅಂಗ ಸಂಸ್ಥೆಯಾಗಿರುವುದು ಕಂಡುಬರುತ್ತದೆ.

ದಿನಾಂಕ:02-12-2021 ಮತ್ತು 08-02-2022 ರಂದು ಮಾನ್ಯ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರ ಅಂಗ ಸಂಸ್ಥೆಯಾಗಿರುವ ಕಾರಣ ಸದರಿಯವರಿಗೆ ಕಾರ್ಯಾದೇಶ ನೀಡುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಹಾಗೂ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಪಡೆದು ಮುಂದುವರೆಯಲು ಸೂಚಿಸಲಾಗಿರುತ್ತದೆ.



Generated from eOffice by B SREERAMULU, TD-MIN(BS), TRANSPORT MINISTER, Trans on 23/03/2022 02:55 PM

ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು ಪತ್ರ AVL/NET/TC-4/KAR/009/2021-22 ದಿ:08-12-2021ರ ಪತ್ರದಲ್ಲಿ ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು 2019ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಕರೆಯಲಾದ ಟೆಂಡರಿನಲ್ಲಿ ಎಲ್1 (L1) ಬಿಡ್ಡುದಾರರಾಗಿ ಆಯ್ಕೆಯಾದ ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಕ್ರಿಮಿನಲ್ ಹಿನ್ನಲೆಯನ್ನು ಹೊಂದಿರುವುದನ್ನು ಮರೆಮಾಚಿರುವುದರಿಂದ ಅನರ್ಹಗೊಂಡಿರುತ್ತಾರೆ ಮತ್ತು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ನ ಶೇಕಡ 80% ಷೇರನ್ನು ಹೊಂದಿರುತ್ತಾರೆಂದು ಹಾಗೂ ಅದರ ಅಂಗ ಸಂಸ್ಥೆಯಾಗಿರುತ್ತಾರೆಂದು ತಿಳಿಸಿರುತ್ತಾರೆ. ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ನವರು ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಯಾವುದೇ ಯೋಜನೆಯಲ್ಲಿ ಅನುಭವ ಹೊಂದಿರುವುದಿಲ್ಲ ವೆಂದು ತಿಳಿಸುತ್ತಾ, ಪ್ರಸ್ತುತ ಟೆಂಡರಿನಲ್ಲಿ ಭಾಗವಹಿಸಿರುವ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರನ್ನು ಪರಿಗಣಿಸಬಾರದೆಂದು ಮನವಿ ಮಾಡಿರುತ್ತಾರೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸಂಬಂಧಿಸಿದ ಟೆಂಡರ್ ಪ್ರಸ್ತಾವನೆಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮುಖ್ಯ ಕಾನೂನು ಅಧಿಕಾರಿಯವರ ಅಭಿಪ್ರಾಯ ಪಡೆದು M/s. MCT Cards and Technology Ltd., ಇವರನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮುಂದುವರೆಸಲಾಗಿರುತ್ತದೆ.

ಮೇಲ್ಕಂಡ ಎಲಾ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಪ್ರಸ್ತುತ ಕರೆಯಲಾದ ಟೆಂಡರಿನಲ್ಲಿ ಎಲ್1 ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರಲ್ಲಿ ಶೇಕಡ 80% ಷೇರನ್ನು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಹೊಂದಿದ್ದು, ಅದರ ಅಂಗ ಸಂಸ್ಥೆಯಾಗಿರುತ್ತಾರೆ. ಕಾರಣ, ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ರವರನ್ನು ಪರಿಗಣಿಸುವ ಬಗ್ಗೆ ಕಾನೂನು ಇಲಾಖಾ ಅಭಿಪ್ರಾಯ ಪಡೆಯಲಾಗಿದ್ದು, ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಕೋರಲಾಗಿರುತ್ತದೆ.

ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಸ್ವೀಕೃತಗೊಂಡ ನಂತರ ಈ ಬಗ್ಗೆ ನಿಯಮಾನುಸಾರ ಕ್ರಮಕ್ಕೈಗೊಳ್ಳಲಾಗುವುದು.

ಟಿಡಿ 57 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 23/03/2022 02:55 PM